**International Journal of Kannada Research**
www.kannadajournal.com

**ISSN: 2454–5813**
IJKR 2018; 4(1): 09-13
© 2018 IJKR
www.kannadajournal.com
Received: 03-11-2017
Accepted: 04-12-2017

**ವೆಂಕಟೇಶ್ವರ ಕೆ ಕೊಲ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ,
ವಿಭಾಗ, ಗುಲಬರ್ಗಾ
ವಿಶ್ವವಿದ್ಯಾಲಯ ಕಲಬುರಗಿ

**Correspondence**
**ವೆಂಕಟೇಶ್ವರ ಕೆ ಕೊಲ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ,
ವಿಭಾಗ, ಗುಲಬರ್ಗಾ
ವಿಶ್ವವಿದ್ಯಾಲಯ ಕಲಬುರಗಿ

# ವಿಚಾರ ಸಾಹಿತ್ಯದ ಒಳನೋಟಗಳು

**ವೆಂಕಟೇಶ್ವರ ಕೆ ಕೊಲ್ಲಿ**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೈದ್ರಾಬಾದ ಕರ್ನಾಟಕಕ್ಕೆ ತನ್ನದೆಯಾದ ಐತಿಹಾಸಿಕ, ಭೌಗೋಳಿಕ ಮತ್ತು ಸಾಹಿತ್ಯಿಕ ಹಿನ್ನೆಲೆ ಇದೆ. ಕನ್ನಡ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಹೋಲಿಸಿದರೆ ಅತ್ಯಂತ ಶ್ರೀಮಂತವಾದ ಸಾಹಿತ್ಯ. ಕನ್ನಡ ಸಾಹಿತ್ಯ ಚರಿತ್ರೆಯು ಇದೆ ನೆಲದಿಂದ ಆರಂಭಗೊಂಡಿದೆ. ಶ್ರೀವಿಜಯನ ಕವಿರಾಜಮಾರ್ಗದಿಂದ ಆರಂಭಗೊಂಡಿರುವ ಸಾಹಿತ್ಯ ಹಲವಾರು ಏರಿಳಿತಗಳನ್ನು ಅನುಭವಿಸುತ್ತ ಇವೊತ್ತಿನ ಪ್ರಸ್ತುತ ಸಂದರ್ಭದವರೆಗೆ ಬಂದು ನಿಂತಿದೆ. ಈ ಪ್ರದೇಶದಲ್ಲಿ ಕವಿರಾಜಮಾರ್ಗ, ವಡ್ಡಾರಾಧನೆ ಹಲವಾರು ಜನ ಶಿವಶರಣರು, ಸೂಫಿಗಳು, ಹರಿದಾಸರು, ಸಾಧು ಸತ್ಪುರುಷರು, ತತ್ವಪದಕಾರರು, ಜೋಗಿ ಜಂಗಮರು ನೆಲೆಸಿರುವಂತಹ ಸಂಗಮ ಸ್ಥಾನ. ಇಂತಹ ಸಂಗಮ ಸ್ಥಾನವು ಭೌಗೋಳಿಕವಾಗಿಯೂ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದ ಶ್ರೀಮಂತಿಕೆಯನ್ನು ಪಡೆದಿದೆ. ಹೀಗಿರುವಾಗಲೂ ಹೈದ್ರಾಬಾದ ಕರ್ನಾಟಕವನ್ನು ಹಿಂದುಳಿದ ಪ್ರದೇಶ ಎಂದು ಕರೆಯುತ್ತಾರೆ. ರಾಜ್ಯ ಸರಕಾರದಿಂದ ಸಕಾಲಕ್ಕೆ ಸಿಗಬೇಕಾದಂತಹ ಸಹಾಯ ಸೌಕರ್ಯಗಳು ಸಿಗದೆ ಹೋದುದರಿಂದ ಮತ್ತು ಇಲ್ಲಿಯ ಸ್ಥಳೀಯ ಜನಪ್ರತಿನಿಧಿಗಳ ಬೇಜವಾಬ್ದಾರಿಯಿಂದ ಈ ಪ್ರದೇಶವು ನಿರ್ಲಕ್ಷಕ್ಕೆ ಒಳಗಾಗಿ ಹಿಂದುಳಿಯಲು ಕಾರಣವಾಯಿತು. ಒಂದು ಕಡೆ ರಾಜಕೀಯದ ನಿರ್ಲಕ್ಷ ಮತ್ತೊಂದು ಕಡೆ ಆಳುವ ಸರಕಾರಗಳ ಮಲತಾಯಿ ಧೋರಣೆ ಹಾಗೂ ಕೇಂದ್ರದಲ್ಲಿರುವ ಸಂಸ್ಥೆಗಳ, ಪ್ರಾಧಿಕಾರಗಳ ಅಕಾಡೆಮಿಗಳ ಪಕ್ಷಪಾತ ನೀತಿಯಿಂದ ಈ ನೆಲ ನಿಜವಾಗಿಯೂ ಹಿಂದುಳಿಯಲು ಕಾರಣವಾಯಿತು.

ಆದರೆ ಸಾಹಿತ್ಯಿಕವಾಗಿ ಈ ನೆಲ ಅತ್ಯಂತ ಶ್ರೀಮಂತವಾಗಿತ್ತು. ಇಡೀ ಜಗತ್ತೆ ಬೆರಗಾಗುವ ರೀತಿಯಲ್ಲಿ ಇಲ್ಲಿಯ ವಚನಕಾರರ ಮತ್ತು ತತ್ವಪದಕಾರರ ಸಾಹಿತ್ಯವನ್ನು ಗಮನಿಸಬಹುದು. ಇಷ್ಟೆಲ್ಲ ಸಂಪತ್ಭರಿತವಾದ ಪ್ರದೇಶಕ್ಕೆ ಹಿಂದುಳಿದ ಪ್ರದೇಶ ಎಂಬ ಹಣೆ ಪಟ್ಟಿಯನ್ನು ಕಟ್ಟಿದ್ದಾರೆ. ಏನೇ ಆದರೂ ಈ ನೆಲ ಸಾಹಿತ್ಯಕ್ಷೇತ್ರದಲ್ಲಿ ಅಪಾರ ಶ್ರೀಮಂತಿಕೆಯನ್ನು ಗಳಿಸಿದೆ. ಅದರಲ್ಲೂ ಮೌಲಿಕವಾದ ವೈಚಾರಿಕ ಸಾಹಿತ್ಯ ಅಥವಾ ವಿಚಾರ ಸಾಹಿತ್ಯವನ್ನು ತಮ್ಮ ಬದುಕಿನುದ್ದಕ್ಕೂ ಉಳಿಸಿಕೊಂಡು, ಪೋಷಿಸಿಕೊಂಡು ಬಂದಿದ್ದನ್ನು ನೋಡಬಹುದು. ಇಲ್ಲಿಯ ಜನ ತಡವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟರೂ ಕೂಡ ವೈಚಾರಿಕತೆಯನ್ನು ತಮ್ಮ ಒಡಲೊಳಗಿಟ್ಟುಕೊಂಡೆ ಬಂದಿದ್ದಾರೆ. ಈ ಪ್ರದೇಶದ ಜನ ಹೆಚ್ಚಾಗಿ ವೈಚಾರಿಕತೆಯತ್ತ ವಾಲಲು ತುಂಬಾ ಪ್ರಮುಖವಾಗಿ ಶರಣರ, ಸೂಫಿಗಳ, ತತ್ವಪದ ಕಾರರ ವೈಚಾರಿಕ ನಿಲುವೆ ಪ್ರಮುಖ ಕಾರಣ ವಾಗಿದೆ ಎಂದು ಹೇಳಬಹುದು. ಸೂಫಿ, ಶರಣರ, ತತ್ವಪದಕಾರರ ವೈಚಾರಿಕ ನಿಲುವುಗಳು ಬಹುಬೇಗ ಇಲ್ಲಿಯ ಜನರನ್ನು, ಕವಿ, ಕಲಾವಿದರನ್ನು ಆಕರ್ಷಿಸಿದವು. ಅದರಿಂದ ಇಲ್ಲಿಯ ಜನ ಹೆಚ್ಚು ವೈಚಾರಿಕತೆಯನ್ನು ಕುರಿತು ಮಾತನಾಡಲು ಮತ್ತು ಬರೆಯಲು ಪ್ರಾರಂಭಿಸಿದರು. ವೈಚಾರಿಕ ಕ್ಷೇತ್ರದಲ್ಲಿ ತಮ್ಮದೆ ಆದ ಛಾಪನ್ನು ಮೂಡಿಸಿದವರಲ್ಲಿ ಹಲವಾರು ಜನರನ್ನು ಹೆಸರಿಸಬಹುದು. ಅದರಲ್ಲಿ ಪ್ರಮುಖವಾಗಿ ಬಿ.ಶಾಮಸುಂದರ ಅವರಿಂದ ಹಿಡಿದುಕೊಂಡು ಈ ಆಧುನಿಕ ವಿಚಾರವಾದಿಗಳಾದ ಲಿಂಗಣ್ಣ ಸತ್ಯಂಪೇಟ, ಅಲ್ಲಮಪ್ರಭು ಬೆಟ್ಟದೂರ, ಡಾ.ಬಸವರಾಜ ಸಬರದ, ಲಿಂಗಣ್ಣ.ಬಿ.ಗಾಣದಾಳ, ಗಂಗಾಧರ ಕುಷ್ಟಗಿ, ಮೀನಾಕ್ಷಿ ಬಾಳಿ, ಕೆ.ನೀಲಾ, ಎಚ್.ಟಿ.ಪೋತೆ ಇನ್ನು ಹಲವಾರು ಜನ ವಿಚಾರ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಗುರುತಿಸುವ ಸಲುವಾಗಿ ಡಾ.ಕೈಲಾಸ ಡೋಣಿಯವರು 'ಹೈದ್ರಾಬಾದ ಕರ್ನಾಟಕದ ವಿಚಾರ ಸಾಹಿತ್ಯ' ಎಂಬ ವಿಷಯವನ್ನು ತೆಗೆದುಕೊಂಡು ಸಂಶೋಧನಾಧ್ಯಯನವನ್ನು ಕೈಗೊಂಡು ಈ ಮೇಲೆ ಹೆಸರಿಸಿದ ವಿಚಾರವಾದಿಗಳ ಸಾಹಿತ್ಯವನ್ನು ಅಮೂಲಾಗ್ರವಾಗಿ ಅಧ್ಯಯನಕ್ಕೊಳಪಡಿಸಿ ಒಂದು ಅದ್ಭುತವಾದಂತಹ ಮಹಾಪ್ರಬಂಧವನ್ನು ಈ ಕ್ಷೇತ್ರಕ್ಕೆ ಅರ್ಪಿಸಿರುವಂತಹದ್ದು

ಅಭಿನಂದನಾರ್ಹವಾಗಿದೆ.

ಈ ಅಧ್ಯಯನದಲ್ಲಿ ಒಟ್ಟು ಒಂಭತ್ತು ಅಧ್ಯಾಯಗಳನ್ನು ಒಳಗೊಂಡಿದ್ದು ವಿಚಾರ ಸಾಹಿತ್ಯದ ಪರಂಪರೆ, ಹೈದ್ರಾಬಾದ ಕರ್ನಾಟಕದಲ್ಲಿ ವಿಚಾರವಾದದ ಪರಂಪರೆ, ಹೈದ್ರಾಬಾದ ಕರ್ನಾಟಕದ ಪ್ರಮುಖ ವಿಚಾರವಾದಿ ಚಿಂತಕರ ಸಂಕ್ಷಿಪ್ತ ಪರಿಚಯ, ಜನಪರ ಚಳುವಳಿಗಳು, ಹೈದ್ರಾಬಾದ ಕರ್ನಾಟಕ ವಿಚಾರ ಸಾಹಿತ್ಯದ ತೌಲನಿಕ ಅಧ್ಯಯನ, ವಿಚಾರ ಸಾಹಿತ್ಯಕ್ಕೆ ಹೈದ್ರಾಬಾದ ಕರ್ನಾಟಕ ಲೇಖಕರ ಕೊಡುಗೆ ಹೀಗೆ ಹಲವಾರು ಉಪ ಅಧ್ಯಾಯಗಳನ್ನು ಹೊಂದಿದ್ದು ಇದೊಂದು ಮಹತ್ವದ ಪ್ರಬಂಧವಾಗಿದೆ ಮತ್ತು ವಿಚಾರ ಸಾಹಿತ್ಯದ ಅಭ್ಯಾಸಿಗಳಿಗೆ ಇದೊಂದು ಕೈಪಿಡಿಯಂತಿದೆ. ಕೈಲಾಸ ಡೋಣಿಯವರು ಈ ವಿಷಯವನ್ನು ಅಧ್ಯಯನಕ್ಕೊಳಪಡಿಸಿ ವಿಚಾರ ಸಾಹಿತ್ಯದ ಬಗ್ಗೆ ಅಪಾರವಾದ ಮಾಹಿತಿಯನ್ನು ಸಂಗ್ರಹಿಸಿ ಒಂದು ಕಡೆಗೆ ತಂದು ಅದನ್ನು ವಿಚಾರಿಸಿ, ವಿಮರ್ಶೆಗೊಳಪಡಿಸಿ ಇಲ್ಲಿ ಚರ್ಚಿಸಿದ್ದಾರೆ. ಇದು ಒಟ್ಟು ಒಂಭತ್ತು ಅಧ್ಯಾಯಗಳನ್ನೊಳಗೊಂಡು ೨೯೫ ಪುಟಗಳನ್ನು ಹೊಂದಿರುವ ಮಹತ್ವದ ಸಂಶೋಧನಾ ಗ್ರಂಥ. ಇದನ್ನು ಅವಲೋಕಿಸಿದಾಗ ಸಂಶೋಧಕರ ಶ್ರಮ ಇಲ್ಲಿ ಎದ್ದು ಕಾಣುತ್ತದೆ. ಒಬ್ಬ ಸಂಶೋಧಕನಿಗೆ ಅಧ್ಯಯನ ಮಾಡುವಾಗ ತನ್ನದೇ ಆದ ಇತಿ ಮಿತಿಗಳಿರುತ್ತವೆ. ಆ ಎಲ್ಲ ಇತಿಮಿತಿಗಳನ್ನು ಗಮನಿಸಿಯೇ ತನ್ನ ಅವಧಿಯಲ್ಲಿ ಆ ವಿಷಯಕ್ಕೆ ನ್ಯಾಯ ಒದಗಿಸಿ ಕೊಡುವ ಕೆಲಸವನ್ನು ಮಾಡಬೇಕಾಗುತ್ತದೆ. ಅಂತಹದ್ದೆ ಕೆಲಸವನ್ನು ಈ ಪ್ರಬಂಧಕಾರರಾದ ಡೋಣಿಯವರು ಇಲ್ಲಿ ಮಾಡಿದ್ದನ್ನು ನಾವು ಗಮನಿಸಬಹುದು.

ವಿಚಾರ ಸಾಹಿತ್ಯ ಅಥವಾ ವಿಚಾರವಂತಿಕೆ ಎಂಬುದು ಮನುಷ್ಯನ ಸ್ವಂತ ವಿಚಾರಕ್ಕೆ ಸಂಬಂಧಿಸಿದ್ದು. ಅದು ಇತರೆ ಯಾರಿಂದಲೂ ಎರವಲು ಪಡೆಯುವಂತಹದಲ್ಲ. ಅವನಿಗೆ ಹುಟ್ಟಿನಿಂದಲೇ ವಿಚಾರ ಮಾಡುವ ಶಕ್ತಿಯು ಬಂದಿರುತ್ತದೆ. ಇದರಿಂದಲೆ ಮನುಷ್ಯನನ್ನು ನಾವು ಇತರೆ ಪ್ರಾಣಿಗಳಿಗಿಂತ ಭಿನ್ನವಾಗಿ ಕಾಣುತ್ತೇವೆ. ಅದಕ್ಕೆ ಆತನನ್ನು ವಿಚಾರವಂತ ಪ್ರಾಣಿ ಎಂದು ಕರೆಯುತ್ತಾರೆ. ಇತರ ಪ್ರಾಣಿವರ್ಗದಿಂದ ಅವನನ್ನು ಬೇರ್ಪಡಿಸುವ ಮತ್ತು ಜೀವಸಂಕುಲದಲ್ಲಿ ಪ್ರಬಲವನ್ನಾಗಿಸಿರುವ ವಿಶಿಷ್ಟ ಗುಣಗಳೆಂದರೆ, ಬುದ್ಧಿವಂತಿಕೆ ಮತ್ತು ವಿಚಾರವಂತಿಕೆಗಳು. ಬುದ್ಧಿವಂತರೆಲ್ಲರೂ ವಿಚಾರವಂತರಾಗಿರಲೇಬೇಕೆಂಬ ನಿಯಮವಿಲ್ಲ. ಸ್ಥೂಲ ಅರ್ಥದಲ್ಲಿ ವಿಮರ್ಶಾತ್ಮಕವಾದ ಬುದ್ಧಿವಂತಿಕೆಯನ್ನೇ ವಿಚಾರವಂತಿಕೆ ಎಂದು ಕರೆಯಬಹುದು.

ವೈಚಾರಿಕತೆ ಎಂಬುದು ಒಂದು ಬಗೆಯ ಚಿಂತನಶೀಲತೆ, ಅದು ತನ್ನ ಮತ್ತು ಇತರರ ಒಳಿತಿಗೆ ಪೂರಕವಾಗಬಲ್ಲ ಒಟ್ಟು ಪರಿಸರವನ್ನು ಬಯಸುತ್ತದೆ. ಮಾನವನ ಬದುಕಿನ ಆರಂಭದಿಂದ ಹಿಡಿದು ಕೊನೆಯವರೆಗೆ ಎಲ್ಲ ವಸ್ತು ವಿಷಯ ಮತ್ತು ಸಂದರ್ಭಗಳು ವೈಚಾರಿಕತೆಯ ತೆಕ್ಕೆಯಲ್ಲಿ ಕಾಣಬರುತ್ತವೆ. ಅದರಲ್ಲಿ ಲಿಂಗ, ಬಣ್ಣ, ಜಾತಿ, ಅಂತಸ್ತು, ವರ್ಗ, ವರ್ಣ, ಶಿಕ್ಷಣ, ಸಾಹಿತ್ಯ, ಸಮಾಜ, ಧರ್ಮ, ವಿಚಾರಧಾರೆಗಳು ಇವೆ ಮುಂತಾದ ಹತ್ತು ಹಲವು ವಿಷಯಗಳು ಎಡೆ ಪಡೆಯುತ್ತವೆ. ಹಾಗೆ ನೋಡಿದರೆ, ವೈಚಾರಿಕತೆಯ ವ್ಯಾಪ್ತಿಯಿಂದ ಹೊರಗುಳಿಯಬಹುದಾದ ವಸ್ತುವಾಗಲಿ, ವಿಷಯವಾಗಲಿ ಈ ಪ್ರಪಂಚದಲ್ಲಿ ಇಲ್ಲವೆಂದೇ ಹೇಳಬಹುದು. ಮನುಷ್ಯನ ಎದುರಿಗೆ ಸಾವಿರಾರು ವಿಚಾರಗಳು ಇರುತ್ತವೆ. ಅವುಗಳಲ್ಲಿ ಹರಿತವಾದ ಮತ್ತು ಜನೋಪಯೋಗಿಯಾದ ಕೆಲವನ್ನು ಮಾತ್ರ ಹೊಂದಿಸಿಕೊಂಡು ಒಬ್ಬ ವ್ಯಕ್ತಿ ತನ್ನ ವೈಚಾರಿಕತೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಮನುಷ್ಯನ ಜೀವನದಲ್ಲಿ ವಿಚಾರದಿಂದಲೇ ಬದಲಾವಣೆ, ವಿಚಾರದಿಂದಲೇ ಬೆಳಕು ಎಂದು ಹೇಳಬಹುದು. ವೈಚಾರಿಕತೆ ಎಂದರೆ ಒಂದು ರೀತಿಯ ಬಂಡಾಯವಿದ್ದಂತೆ. ಜಿಡ್ಡುಗಟ್ಟಿರುವ ಸಮಾಜವನ್ನು ಪ್ರಶ್ನಿಸುವಂತಹ ಮೇಧ ಶಕ್ತಿಯೇ ವೈಚಾರಿಕತೆ. ಸಮಾಜದಲ್ಲಿ ನಡೆಯುವ ಎಲ್ಲಾ ಆಗುಹೋಗುಗಳನ್ನು ಗಮನಿಸಿ ಅವುಗಳನ್ನು ಯಥಾವತ್ತಾಗಿ ಅನುಕರಿಸುವುದನ್ನು ವಿಚಾರವಾದ ಎಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಅದು ಯಥಾವತ್ ಅನುಕರಣೆಯಾಗುತ್ತದೆ. ತಂದೆ, ಗುರು, ಹಿರಿಯರು ಹೇಳಿದ್ದಾರೆ ಎಂದು ಹಾಗೆಯೇ ಅದನ್ನು ಯಥಾವತ್ತಾಗಿ ಸ್ವೀಕರಿಸುವುದಲ್ಲ. ಅದನ್ನು ಪ್ರಜ್ಞಾವಂತರಾದಂತಹ ನಾವುಗಳು ವಿಚಾರಿಸಿ, ವಿಮರ್ಶಿಸಿ ತರ್ಕಿಸಿ, ಒರೆಗೆ ಹಚ್ಚಿ ಅದು ಸರಿ ಎನಿಸಿದಾಗ ಮಾತ್ರ ಸ್ವೀಕರಿಸಬೇಕು. ನಮಗೆ ಬುದ್ಧ ಗುರು ಅದನ್ನೇ ಹೇಳುತ್ತಾನೆ. ದೇವರು ಹೇಳಿದ್ದಾನೆ ಎಂದು ಕುರುಡಾಗಿ ಸ್ವೀಕರಿಸಬೇಡ ಅದನ್ನು ತರ್ಕಿಸಿ ನೋಡಿ ಸರಿ ಕಂಡರೆ ಸ್ವೀಕರಿಸು ಎಂದು, ಇಂತಹದ್ದಕ್ಕೆ ವಿಚಾರವಾದ ಎನ್ನಬಹುದು.

ಇಂತಹ ವೈಚಾರಿಕವಾದ, ಜನಪರವಾದ, ಜೀವಪರವಾದ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಪರಂಪರೆಯ ಸಾಹಿತ್ಯವನ್ನು ವೈಚಾರಿಕತೆ ಎಂದು ಕರೆಯುತ್ತೇವೆ. ಇಂತಹ ವೈಚಾರಿಕತೆಯನ್ನು ಕುರಿತು ಕೈಲಾಸ ಡೋಣಿಯವರು ವಿಚಾರವಾದದ ಪರಂಪರೆ ಎಂಬ ಅಧ್ಯಾಯದಲ್ಲಿ ವಿಚಾರವಾದಕ್ಕೆ ಮೂಲ ಪುರುಷನಾದ ಭಗವಾನ್ ಬುದ್ಧನಿಂದ ಅದನ್ನು ಗುರುತಿಸುತ್ತಾರೆ. ಬುದ್ಧ, ಕಶ್ಯಪ, ಕಾತ್ಯಯನ, ಲೋಕಾಯುತರು, ಚಾರ್ವಾಕರಿಂದ ಹಿಡಿದು ಪಂಪ ಮತ್ತು ಆತನ ಸಮಕಾಲೀನ ವ್ಯಕ್ತಿಗಳಲ್ಲಿರುವ ವೈಚಾರಿಕತೆಯನ್ನು ಗುರುತಿಸುತ್ತಾ ಅಲ್ಲಿಂದ ಸಾಮಾಜಿಕ ಪರಿವರ್ತನಾ ಚಳುವಳಿಯ ಹರಿಕಾರರಾದ ಜ್ಯೋತಿಬಾಫುಲೆ, ಸಾವಿತ್ರಿಬಾಯಿ ಫುಲೆ, ಮಾರ್ಕ್ಸ್, ಲೆನಿನ್, ಪೆರಿಯಾರ್, ಲೋಹಿಯಾ, ಗಾಂಧಿ, ಅಂಬೇಡ್ಕರ್ ಮುಂತಾದ ಜಾಗತಿಕ ಚಿಂತಕರ ಹಿನ್ನೆಲೆಯಲ್ಲಿ ಈ ಪರಂಪರೆಯನ್ನು ಗುರುತಿಸಿದ್ದಾರೆ. ಆದರೆ ಇಲ್ಲಿ ವೈಚಾರಿಕತೆಗೆ ಬಹುದೊಡ್ಡ ಹೆಸರು ಮಾಡಿದ ಹೈದ್ರಾಬಾದ ಕರ್ನಾಟಕದ ಏಕೈಕ ಚಳುವಳಿ ಶರಣ ಚಳುವಳಿ. ಅದನ್ನು ಈ ಅಧ್ಯಾಯದಲ್ಲಿ ಸಂಶೋಧಕರು ಗುರುತಿಸುವದಿಲ್ಲ. ಯಾಕೆಂದರೆ ಮುಂದಿನ ಅಧ್ಯಾಯ ಹೈದ್ರಾಬಾದ ಕರ್ನಾಟಕದಲ್ಲಿ ವಿಚಾರವಾದದ ಪರಂಪರೆ ಇರುವ ಕಾರಣಕ್ಕೆ ಕರ್ನಾಟಕದ ವಿಚಾರ ವಾದದ ಪರಂಪರೆಯಲ್ಲಿ ಅದನ್ನು ಸೇರಿಸುವದಿಲ್ಲ. ಇದನ್ನು ನೋಡಿದರೆ ಸಂಶೋಧಕರ ಸ್ವಾರ್ಥ ಕೆಲಸ ಮಾಡಿದ ಹಾಗೆ ಕಾಣುತ್ತದೆ. ಯಾಕೆಂದರೆ ಹೈದ್ರಾಬಾದ ಕರ್ನಾಟಕದಲ್ಲಿ ವೈಚಾರಿಕತೆಯನ್ನು ಗುರುತಿಸುವಾಗ ವಚನಕಾರರನ್ನು ಮತ್ತು ತತ್ವಪದಕಾರರನ್ನು ಗುರುತಿಸಿದರೆ ಈ ಭಾಗಕ್ಕೆ ಅತ್ಯಂತ ಸೂಕ್ತವಾದಂತಹ ಸ್ಥಾನಮಾನಗಳು ದೊರಕಬಹುದು ಎನ್ನುವ ಅವರ ಇಚ್ಛೆಯಾಗಿರಬಹುದು. ಅದನ್ನು ಈ ಅಧ್ಯಾಯದಲ್ಲಿ ಗುರುತಿಸಿದ್ದಾರೆ. ೧೨ನೇ ಶತಮಾನ ವೈಚಾರಿಕತೆಗೆ ಒಂದು ದೊಡ್ಡ ವೇದಿಕೆಯನ್ನು ಒದಗಿಸಿದ ಕಾಲ. ಬಸವಣ್ಣ ಮತ್ತು ಆತನ ಸಮಕಾಲೀನ, ಹಿರಿಯ ಮತ್ತು ಕಿರಿಯ ಶರಣರೆಲ್ಲರು ಸಮಾಜದಲ್ಲಿರುವ ಅಸ್ಪೃಶ್ಯ ಅಸಮಾನತೆ, ಜಾತಿಯತೆ, ಲಿಂಗ ತಾರತಮ್ಯ, ಮೂಢನಂಬಿಕೆ ಮುಂತಾದವುಗಳನ್ನು ಕುರಿತು ಇಲ್ಲಿ ಮಾತನಾಡಿದ್ದಾರೆ.

ಕುರಿ ಕೋಳಿ ಕಿರಿಮೀನು ತಿಂಬುವರಿಗೆಲ್ಲ ಕುಲಜ, ಕುಲಜರೆಂದೆಂಬರು

ಶಿವಗೆ ಪಂಚಾಮೃತ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು

ಅವರೆಂತು ಕೀಳು ಜಾತಿಯಾದರು? ಜಾತಿಗಳೇ ನಿವೇಕೆ ಕೀಳಾಗಿರೋ?

ಬ್ರಾಹ್ಮಣನುಂಡುದ್ದು ಪುಲ್ಲಿಗೆ ಶೋಭಿತವಾಗಿ ನಾಯಿನೆಕ್ಕಿ ಹೋಯಿತು
ಮಾದಿಗರುಂಡುದ್ದು ಪುಲ್ಲಿಗೆ ಬ್ರಾಹ್ಮಣಿಗೆ ಶೋಭಿತವಾಯಿತು
ಅದೆಂತೆಡೆ ಸಿದ್ದಲಿಕೆಯಾಯಿತು ಸಗ್ಗಳಿಕೆಯಾಯಿತು
ಸಿದ್ದಲಿಕೆಯ ತುಪ್ಪವನ್ನು ಸಗ್ಗಳಿಕೆಯ ನೀರನ್ನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯ

ಎಂದು ಹೇಳುವುದರ ಮೂಲಕ ಕಾಳವ್ವೆ ವೈಚಾರಿಕತೆಗೆ ಬಹುದೊಡ್ಡ ಬೆಂಬಲವನ್ನು ನೀಡಿದ್ದಾಳೆ. ಶರಣರ ನಂತರ ದಾಸರು ಮತ್ತು ತತ್ವಪದಕಾರರು ಕೂಡ ವೈಚಾರಿಕತೆಗೆ ಬಹುದೊಡ್ಡ ಹೆಸರಾಗಿದ್ದಾರೆ. ತತ್ವಪದಕಾರನಾಗಿರುವಂತಹ ಕಡಿಕೋಳ ಮಡಿವಾಳಪ್ಪನವರು ಹೀಗೆ ಹೇಳುತ್ತಾರೆ.

ಶೀಲವಂತರಂತೀರಿ ಸುಳ್ಳೆ ಶೀಲ ಮಾಡ್ತೀರಿ
ಸಂತ್ಯಾನ ಲಿಂಗ ಕಟ್ಟಿಕೊಂಡು ಸತ್ಯಾನಾಸಾಗಿ ಹೋಗತೀರಿ

ಎಂದು ಹೇಳುವುದರ ಮೂಲಕ ಜನರಲ್ಲಿ ವೈಚಾರಿಕತೆಯ ಪ್ರಜ್ಞೆಯನ್ನು ತುಂಬಿದ್ದಾರೆ. ಇವರ ನಂತರ ಕರ್ನಾಟಕದಲ್ಲಿ ಕುವೆಂಪು, ಕಾರಂತರು, ಮಾಸ್ತಿ, ಬೇಂದ್ರೆ ಹೀಗೆ ಹಲವಾರು ಲೇಖಕರು ವೈಚಾರಿಕತೆಯನ್ನು ಕುರಿತು ಮಾತನಾಡಿದ್ದಾರೆ. ನಂತರ ಕೆ.ಎಸ್.ಭಗವಾನ್, ಎಚ್.ನರಸಿಂಹಯ್ಯ, ದೇವನೂರ ಮಹಾದೇವ ಮುಂತಾದವರ ಜೊತೆಗೆ ಹೈದ್ರಾಬಾದ ಕರ್ನಾಟಕದಲ್ಲಿ ಪ್ರಮುಖವಾಗಿ ಲಿಂಗಣ್ಣ ಸತ್ಯಂಪೇಟೆ, ಅಲ್ಲಂಪ್ರಭು ಬೆಟ್ಟದೂರ, ಬಸವರಾಜ ಸಬರದ, ಲಿಂಗಣ್ಣ ಗಾಣದಾಳ, ಮೀನಾಕ್ಷಿ ಬಾಳಿ, ಹೆಚ್.ಟಿ.ಪೋತೆ, ರಂಗರಾಜ ವನದುರ್ಗ, ಕೆ.ನೀಲಾ, ಗಂಗಾಧರ ಕುಷ್ಟಗಿ, ವಿಶ್ವರಾಧ್ಯ ಸತ್ಯಂಪೇಟೆ ಮುಂತಾದ ಚಿಂತಕರನ್ನು ಕುರಿತು ಚರ್ಚಿಸಿದ್ದಾರೆ. ಇಲ್ಲಿ ಸಂಶೋಧಕರು ಹೈದ್ರಾಬಾದ ಕರ್ನಾಟಕದ ಪ್ರಮುಖ ವಿಚಾರವಾದಿ ಚಿಂತಕರು ಎಂದು ಮತ್ತು ವಿಚಾರ ಸಾಹಿತ್ಯಕ್ಕೆ ಹೈದ್ರಾಬಾದ ಕರ್ನಾಟಕದ ಲೇಖಕರ ಕೊಡುಗೆ ಎಂದು ಎರಡು ಅಧ್ಯಾಯಗಳನ್ನು ಮಾಡಿದ್ದಾರೆ. ಆದರೆ ಇಲ್ಲಿ ಇವರೆಡು ಅಧ್ಯಾಯಗಳು ಅದೇ ಲೇಖಕರನ್ನು ಕುರಿತು ಹೇಳುವುದರಿಂದ ಒಂದರಲ್ಲೇ ಇದನ್ನು ಹೇಳಬಹುದಾಗಿತ್ತು. ಆದರೆ ಸಂಶೋಧಕರು ಹಾಗೆ ಮಾಡದೆ ಎರಡು ಅಧ್ಯಾಯಗಳನ್ನು ಬೇರೆ ಬೇರೆ ಮಾಡಿದ್ದಾರೆ. ಪ್ರಮುಖ ವಿಚಾರವಾದಿಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಿ ಓದುಗರಿಗೆ ಸೂಕ್ತ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ.

### ೧. ಲಿಂಗಣ್ಣ ಸತ್ಯಂಪೇಟೆ

ಲಿಂಗಣ್ಣ ಸತ್ಯಂಪೇಟೆಯವರು ಹೈದ್ರಾಬಾದ್ ಕರ್ನಾಟಕದ ಪ್ರಮುಖ ವಿಚಾರವಾದಿ ಚಿಂತಕರಲ್ಲಿ ಒಬ್ಬರಾಗಿದ್ದಾರೆ. ಇವರು ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ವನದುರ್ಗದವರು. ವೃತ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಪ್ರವೃತ್ತಿಯಿಂದ ಹೋರಾಟಗಾರರಾಗಿ ಕೆಲಸದಲ್ಲಿ ತೊಡಗಿದವರು. ಈ ಭಾಗದ ಜಾತ್ಯತೀತ ಆಂದೋಲನದ ಒಬ್ಬ ಹಿರಿಯ ಚಿಂತಕ ಮತ್ತು ಹೋರಾಟಗಾರ. ಶಿಕ್ಷಕರಾಗಿದ್ದ ಇವರು ಸಾವಧಾನ ಮತ್ತು ಪ್ರಪಂಚ ಎಂಬ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ೧೯೭೨ ರಲ್ಲಿ ದೇಶದಲ್ಲಿ ಭೀಕರ ಬರಗಾಲ ಇದ್ದಂತಹ ಸಂದರ್ಭದಲ್ಲಿ ವಿಶ್ವ ಕಲ್ಯಾಣ ಪತ್ರಿಕೆಗೆ ಬರಗಾಲದ ಬವಣೆಗಳನ್ನು ಕುರಿತು ಬರೆಯುತ್ತಿದ್ದರು.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಯುವಕರಲ್ಲಿ ಜಾಗೃತಿಯನ್ನು ಮೂಡಿಸಲು "ಯುವಜನ ವಿಚಾರ ವೇದಿಕೆ"ಯನ್ನು ಸ್ಥಾಪಿಸಿದರು. ರೈತಚಳುವಳಿಯಲ್ಲಿ ಭಾಗವಹಿಸಿದ್ದರು. ಕಲ್ಯಾಣ ನಾಡಿನ ಶರಣ ಸಾಹಿತ್ಯ ಪರಿಷತ್ತು ಆರಂಭಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ನಂತರ ಬಸವಮಾರ್ಗ ಪತ್ರಿಕೆಯನ್ನು ಪ್ರಾರಂಭಿಸಿದರು. ಸಮಾಜದಲ್ಲಿ ಪ್ರಮಾಣಿಕತೆ, ನಿಷ್ಠಾವಂತಿಕೆ, ಬದ್ಧತೆ, ಕಾರ್ಯಕ್ಷಮತೆ ಮೈಗೂಡಿಸಿಕೊಂಡು ಶರಣರ ವಿಚಾರಗಳನ್ನು ನಾಡಿಗೆ ತಿಳಿಸಲು ದುಡಿಯುತ್ತಿದ್ದರು. "ಸುತ್ತಾಟದ ಸ್ಮೃತಿ, ಬಸವ ಚಳುವಳಿ, ಗ್ರಾಮ ಸಮರ, ಜಗಳಗಂಟರ ಜಗತ್ತು, ಸೂಳೆ ಸಂಕವ್ವೆ" ಮುಂತಾದ ಕೃತಿಗಳನ್ನು ರಚಿಸಿ ವೈಚಾರಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಸತ್ಯಂಪೇಟೆಯವರು 'ಬಸವಮಾರ್ಗದ ಮೂಲಕ ಜನಜಾಗೃತಿಯ ಕೆಲಸವನ್ನು ಮಾಡಿದ್ದಾರೆ. ಇವರ ಜಗಳಗಂಟರ ಜಗತ್ತು ಕೃತಿಯಲ್ಲಿ ಸಾಮಾಜಿಕ ಸಮಸ್ಯೆಗಳಾದ ಜಾತಿಪದ್ಧತಿ, ಜಡಸಂಸ್ಕೃತಿ, ಶೋಷಣೆ, ಸ್ತ್ರೀಯರ ಸಮಸ್ಯೆ, ಮೋಸ ವಂಚನೆ, ಅತ್ಯಾಚಾರ, ರೈತನ ಗೋಳು, ದೇವರು ಧರ್ಮಗಳ ನಿರಾಕರಣೆಯನ್ನು ಮಾಡುತ್ತಾ ಪ್ರೀತಿ, ಪ್ರೇಮ ಮುಂತಾದ ಅಂಶಗಳನ್ನು ಕುರಿತು ಸಮಾಜದಲ್ಲಿ ಅರಿವು ಮೂಡಿಸುವಂತಹ ಕಾರ್ಯ ಮಾಡಿದ್ದಾರೆ. ವರ್ತಮಾನದಲ್ಲಿ ಒಬ್ಬ ಬರಹಗಾರ ದೇಶದಲ್ಲಿ ನಡೆಯುವ ವಿದ್ಯಮಾನಗಳ ಕುರಿತು ಚರ್ಚಿಸುವುದರ ಮೂಲಕ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಪ್ರಜ್ಞೆಯನ್ನು ಇಟ್ಟುಕೊಂಡು ಜನಜಾಗೃತಿಯನ್ನು ಮಾಡುತ್ತಾ ಬಂಡವಾಳಶಾಹಿಗಳ ಮೋಸ, ಜಮೀನ್ದಾರರ ದರ್ಪ, ದಬ್ಬಾಳಿಕೆಗಳು, ಮಠ ಮಾನ್ಯಗಳಿಂದ ನಡೆಯುತ್ತಿರುವ ಮೌಢ್ಯ ಅಂಧಕಾರ ಮೂಢನಂಬಿಕೆ, ಅಡ್ಡಪಲ್ಲಕಿಯ ಉತ್ಸವದ ನಿರಾಕರಣೆಗಳು ಬಸವಾದಿ ಶರಣರ ವಚನಗಳ ಮೂಲಕ ಅದನ್ನು ಪ್ರಸ್ತುತಪಡಿಸಿದ್ದಾರೆ.

### ೨. ಅಲ್ಲಮಪ್ರಭು ಬೆಟ್ಟದೂರ

ವೈಚಾರಿಕ ಚಿಂತಕ, ಕವಿ, ಹೋರಾಟಗಾರ, ಬಂಡಾಯಗಾರರಾದ ಬೆಟ್ಟದೂರ ಅವರು ಈ ಭಾಗದ ಹೆಮ್ಮೆಯ ಕವಿಯಾಗಿದ್ದಾರೆ. ೧೯೫೧ ರಲ್ಲಿ ಜನಿಸಿದ ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದ ಇವರಿಗೆ ಚಂಪಾ ಮತ್ತು ಬುದ್ದಣ್ಣ ಹಿಂಗಮಿರೆಯರ ನೇರ ಪ್ರಭಾವಕ್ಕೊಳಗಾಗಿದ್ದರು. ಇವರು ಸರ್ವಾಧಿಕಾರವನ್ನು ತೀವ್ರವಾಗಿ ವಿರೋಧಿಸುತ್ತ 'ಇದು ನನ್ನ ಭಾರತ', 'ಕುದುರೆ ಮೋತಿ' ಮತ್ತು 'ನೀಲಗಿರಿ' ಹಾಗೂ 'ಕೆಡಹ ಬಲ್ಲರು ಅವರು ಕಟ್ಟಬಲ್ಲೆವು ನಾವು' ಎಂಬ ಕಾವ್ಯ ಸಂಕಲನಗಳನ್ನು ಪ್ರಕಟಿಸಿದರು. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಕೇಸರೀಕರಣದ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ವಿಮರ್ಶಿಸುತ್ತ ತಮ್ಮ ಲೇಖನಗಳಲ್ಲಿ ವಿವರಿಸುತ್ತ ಹೋಗಿದ್ದಾರೆ. ಇವರ 'ವರ್ತಮಾನ' ಎಂಬ ಕೃತಿಯು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮೌಲ್ಯಗಳು ಧರ್ಮ, ಜಾತಿ, ಮತ, ಪಂಥಗಳ ವಿರುದ್ಧ ವೈಚಾರಿಕ ನೆಲೆಯಲ್ಲಿ ಚರ್ಚಿಸುವ ಮೂಲಕ ಓದುಗರನ್ನು ಚಿಂತನೆಗೆ ಒಳಪಡಿಸುತ್ತದೆ. ಗ್ರಾಮೀಣ ಸಮಸ್ಯೆ, ಕನ್ನಡ ಚಳುವಳಿ, ಅಸ್ಪೃಶ್ಯತೆ, ಕಂಬಾಲಪಲ್ಲಿ ನರಮೇಧ, ಜ್ಯೋತಿಷ್ಯ ವಾಸ್ತು, ಕೃಷಿ ಮತ್ತು ದಲಿತರ', ಮಹಿಳೆಯರ, ರೈತರ, ಕೂಲಿಕಾರ್ಮಿಕರ ಮುಂತಾದ ಸಮಸ್ಯೆಗಳನ್ನು ಕುರಿತ ಚಿಂತನೆಗಳು ಅವರ ಬರಹಗಳಲ್ಲಿ ಕಾಣಬಹುದು.

### ೩. ಬಸವರಾಜ ಸಬರದ

ಕವಿ, ನಾಟಕಕಾರ, ವಿಮರ್ಶಕ ಸಂಶೋಧಕ ಮತ್ತು ಸಂಪಾದಕರಾಗಿ, ಹೋರಾಟಗಾರರಾಗಿ ಅನೇಕ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಕೊಪ್ಪಳ ಮೂಲದವರಾದ ಇವರು ಗುಲಬರ್ಗಾದಲ್ಲಿ ತಮ್ಮ ವೃತ್ತಿಯನ್ನು ಕೈಗೊಂಡು ಸಾಹಿತ್ಯ ಕ್ಷೇತ್ರಕ್ಕೆ

ಅಪಾರ ಕೊಡುಗೆಯನ್ನು ನೀಡಿದ್ದಾರೆ. ಕಾವ್ಯ, ನಾಟಕ, ಬೀದಿನಾಟಕ, ಸಂಶೋಧನೆ, ಸಂಪಾದನೆಗಳನ್ನು ರಚಿಸಿ ೧೦೦ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಸಬರದ ಅವರು ಬರವಣಿಗೆಯ ಜೊತೆಗೆ ಹೋರಾಟಗಾರರಾಗಿದ್ದರು. ಅನೇಕ ಸಮಸ್ಯೆಗಳಿಗೆ ನೇರವಾಗಿ ಹೋರಾಟ ಮಾಡಿದ್ದಾರೆ. ಕರ್ನಾಟಕದ ಪ್ರಮುಖ ಬಂಡಾಯಗಾರರಲ್ಲಿ ಒಬ್ಬರು. ಚನ್ನಣ್ಣ ವಾಲೀಕಾರ ಅವರ ಜೊತೆಗೂಡಿ ಅನೇಕ ಹೋರಾಟಗಳಿಗೆ ಸಾಕ್ಷಿಯಾದರು. ಸಮುದಾಯ ಮತ್ತು ಸಂಸ್ಕೃತಿ, ಮರುಚಿಂತನೆ ಇವು ಇವರ ಪ್ರಮುಖ ವೈಚಾರಿಕ ಕೃತಿಗಳಾಗಿವೆ.

**೪. ಲಿಂಗಣ್ಣ ಬಿ.ಗಾಣದಾಳ**

ವಿಚಾರವಾದಿ, ವಿಮರ್ಶಕ, ನಿಷ್ಠುರವಾದಿ ಚಿಂತಕರಾಗಿ, ವಿಚಾರ ವಿಮರ್ಶೆ ಕ್ಷೇತ್ರದಲ್ಲಿ ತೊಡಗಿರುವ ಲಿಂಗಣ್ಣ ಬಿ.ಗಾಣದಾಳ ಅವರು ರಾಯಚೂರ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಾಣದಾಳ ಗ್ರಾಮದವರು. ಇವರು ಕನ್ನಡ ಸಾಹಿತ್ಯಕ್ಕೆ ಕಾವ್ಯ, ರಂಗಭೂಮಿ, ಜಾನಪದ, ಜೀವನ ಚರಿತ್ರೆ, ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. 'ಕಲಿದೇವರು' ಎಂಬ ಕೃತಿಯನ್ನು ಮಾಚಿದೇವರ ಕುರಿತು ಬರೆದಿದ್ದಾರೆ. ವೈಚಾರಿಕ ನಿಲುವು, ಸಾಮಾಜಿಕ ಸಮಾನತೆ, ಲಿಂಗಾಂಗ ಸಾಮರಸ್ಯಗಳನ್ನು ಕುರಿತು ರಚಿಸಿದ್ದಾರೆ. 'ದೇವರು–ಧರ್ಮದ ಅನಾವರಣ' ಈ ಕೃತಿಯು ವೈಚಾರಿಕವಾದ ನೆಲೆಯಲ್ಲಿ ದೇವರು ಧರ್ಮದ ಪರಿಕಲ್ಪನೆಯನ್ನು ಸಮಾಜಶಾಸ್ತ್ರ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ದೇವತೆಗಳ ನೀತಿ, ವೈದಿಕ ಸಾಹಿತ್ಯ, ಧಾರ್ಮಿಕ ಸಿದ್ಧಾಂತಗಳು ಜಾತಿ ವ್ಯವಸ್ಥೆ, ಧಾರ್ಮಿಕ ಶೋಷಣೆ ಮತ್ತು ಅಂಧಕಾರ, ಮೌಢ್ಯಗಳ ಕುರಿತು ವೈಚಾರಿಕ ನೆಲೆಯಲ್ಲಿ ಚರ್ಚಿಸಿದ್ದಾರೆ.

**೫. ಗಂಗಾಧರ ಕುಷ್ಟಗಿ**

ಇವರು ವೃತ್ತಿಯಲ್ಲಿ ಪತ್ರಕರ್ತರಾಗಿ ಪ್ರವೃತ್ತಿಯಲ್ಲಿ ಹೋರಾಟಗಾರರಾಗಿದ್ದವರು. ರೈತ, ದಲಿತ, ವಿದ್ಯಾರ್ಥಿ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. ಇವರು ೧೯೮೨ ರಲ್ಲಿ ಗಂಗಾವತಿಯ ದಲಿತರ ಭೂ ಹೋರಾಟ ೧೯೮೪ ರಲ್ಲಿ ಯಲಬುರ್ಗಾದ ರೈತ ಹೋರಾಟ, ೧೯೮೫ ರಲ್ಲಿ ಆಂಧ್ರದ ತೆಲುಗು ಗಂಗಾಯೋಜನೆಯ ವಿರುದ್ಧ ಹೋರಾಟ, ಕೃಷ್ಣಾನದಿ ನೀರಿನ ಹಂಚಿಕೆಯಲ್ಲಿ ಆದ ಅನ್ಯಾಯದ ವಿರುದ್ಧ ಹೋರಾಟ, ೧೯೯೫ ರಲ್ಲಿ ಆಲಮಟ್ಟಿ ಆಣೆಕಟ್ಟಿಗೆ ಕ್ರೆಸ್ಟಗೇಟ್ ಕೂಡಿಸುವ ಹೋರಾಟವನ್ನು ಮಾಡಿದ್ದಾರೆ. ೨೦೧೨ ರಲ್ಲಿ ಕುಷ್ಟಗಿ, ಯಲಬುರ್ಗಾ, ಕೊಪ್ಪಳ, ಗಂಗಾವತಿ ತಾಲ್ಲೂಕುಗಳಿಗೆ ಲಕ್ಷಾಂತರ ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಕೃಷ್ಣಾ ಬಿ ಸ್ಕೀಮ್ ಏತ ನೀರಾವರಿ ಯೋಜನೆಗಾಗಿ ಹೋರಾಟವನ್ನು ಮಾಡಿದ್ದಾರೆ. ೫೭೧ (ಜೆ) ಕಲಂ ತಿದ್ದುಪಡಿ ಆದೇಶ ಬರುವವರೆಗೆ ರಾಜ್ಯದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಿದ್ದಾರೆ. ೨೦೧೧ ರಲ್ಲಿ ಮುಂಡರಗಿಯಲ್ಲಿ ಪೋಸ್ಕೋ ಕಂಪನಿ ಬರುವುದನ್ನು ತಡೆಗಟ್ಟಲು ವಾಯ್.ಎನ್.ಗೌಡರ ಜೊತೆ ಸೇರಿ ಹೋರಾಟ ಮಾಡಿದ್ದಾರೆ.

ಇವರ ಪ್ರಜಾ ಪ್ರಭುತ್ವದ ತಲ್ಲಣಗಳು ಎಂಬ ಕೃತಿಯು ಸೈದ್ಧಾಂತಿಕವಾಗಿ ಪರ್ಯಾಯ ರಾಜಕೀಯ ಚಿಂತನೆಗಳನ್ನು ಕುರಿತು ಚರ್ಚಿಸಿದ್ದಾರೆ. ಭಾರತದ ರಾಜಕಾರಣವನ್ನು ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಅನೇಕ ಮಗ್ಗುಲುಗಳಿಂದ ಚರ್ಚಿಸಲು ಪ್ರಯತ್ನಿಸಿದ್ದಾರೆ. ಇವುಗಳ ಜೊತೆಗೆ ಸಂಶೋಧಕರಾದ ಕೈಲಾಸ ಡೋಣಿಯವರು ಇಲ್ಲಿ ಪ್ರಸ್ತುತ ಪ್ರಜಾಪ್ರಭುತ್ವದ ಮೇಲೆ ಆಗುತ್ತಿರುವ ದಾಳಿಗಳನ್ನು ಸಮಕಾಲೀನ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಇವರ ಕೃತಿಯ ಜೊತೆಗೆ ಸಮೀಕರಿಸಿ ಚರ್ಚಿಸಿದ್ದಾರೆ. ಇಂದಿನ ದಿನಮಾನಗಳಲ್ಲಿ ಪ್ರಜಾಪ್ರಭುತ್ವದ ಮೇಲೆ ಯಾವ ರೀತಿಯಾಗಿ ದಾಳಿಗಳು ನಡೆಯುತ್ತಿವೆ. ಖಾಸಗೀಕರಣ, ಉದಾರೀಕರಣ ಜಾಗತೀಕರಣ ಮತ್ತು ಕೇಸರೀಕರಣಗಳ ಮಧ್ಯ ಪ್ರಜಾಪ್ರಭುತ್ವ ತಲ್ಲಣಿಸಿ ಹೋಗುತ್ತಿರುವುದನ್ನು ಗುರುತಿಸಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವವು ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ನಡೆಸುವ ಆಡಳಿತದ ಅರ್ಥ ಕಳಚಿಕೊಂಡು ರಾಜರು ರಾಜರಿಗಾಗಿ, ರಾಜರಿಗೋಸ್ಕರ ನಡೆಸುವ ಸರ್ಕಾರ ಎನ್ನುವ ರೀತಿಯಲ್ಲಿ ಪಕ್ಷಗಳು ಮತ್ತು ಪ್ರತಿನಿಧಿಗಳು ನಡೆದುಕೊಳ್ಳುವ ರೀತಿಯನ್ನು ಸಂಶೋಧಕರು ಬಹಳ ನೋವಿನಿಂದ ಹೇಳುತ್ತಾರೆ. ಈ ರೀತಿಯಾಗಿ ನಡೆದುಕೊಳ್ಳುವುದು ಅಷ್ಟೇ ಅಲ್ಲದೆ ಮೂಲಭೂತವಾದಿಗಳು ಈ ದೇಶದಲ್ಲಿ ಜಾತಿವ್ಯವಸ್ಥೆ ಅನ್ನುವುದೆ ಇರಲಿಲ್ಲ. ಈ ಜಾತಿಗೀತಿ ಎಲ್ಲ ಸುಳ್ಳು ಎಂದು ಜನರನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಮಾಡುವುದಲ್ಲದೆ, ದತ್ತೋಪಂತಟೆಂಗಡಿ ಎನ್ನುವವರು ಸಾಮಾಜಿಕ ಕ್ರಾಂತಿ ಸೂರ್ಯ ಡಾ.ಬಾಬಾಸಾಹೇಬ ಅಂಬೇಡ್ಕರ ಎಂದು ಪುಸ್ತಕವನ್ನು ಬರೆದು ಅದರಲ್ಲಿ ಬಾಬಾ ಸಾಹೇಬರು ಯಾವುದನ್ನು ತಮ್ಮ ಜೀವಮಾನದುದ್ದಕ್ಕೂ ವಿರೋಧಿಸಿದ್ದಾರೋ ಅದನ್ನೇ ಅವರು ಒಪ್ಪಿಕೊಂಡಿದ್ದರು ಎಂದು ನಿಜ ಚರಿತ್ರೆಯನ್ನು ತಿರುಚಿ ಬರೆದಿದ್ದಾರೆ. ಅಂಬೇಡ್ಕರ ಅವರು ಕೇಸರಿ ಧ್ವಜವನ್ನು ರಾಷ್ಟ್ರಧ್ವಜ ಮಾಡಬೇಕು ಎಂದು ಹೇಳುತ್ತಿದ್ದರು. ಮತ್ತು ಆ ಧ್ವಜವನ್ನು ತಮ್ಮ ಕಾರಿನಲ್ಲಿಟ್ಟುಕೊಂಡಿದ್ದರು ಎಂದು ಅವರು ದಾಖಲಿಸುತ್ತಾರೆ. ಹಾಗೆಯೇ ಸಂವಿಧಾನವನ್ನು ಕೂಡ ಅಂಬೇಡ್ಕರ ಅವರು ಬರೆಯಲಿಲ್ಲ ಅಲ್ಲಿ ಒಂದು ಸಂಘ ಇತ್ತು ಅದನ್ನು ಅವರೆಲ್ಲರು ಸೇರಿ ರಚಿಸಿದರು ಎಂದು ಹೇಳುತ್ತಾರೆ. ಒಂದು ಕಮಿಟಿ ಇದ್ದುದ್ದು ನಿಜ. ಆದರೆ ಅವರೆಲ್ಲರೂ ಸಂವಿಧಾನದ ಕರುಡು ಪ್ರತಿ ಮುಗಿಯುವವರೆಗೆ ಇರಲಿಲ್ಲ ಎಂಬುದು ಗೊತ್ತಿದ್ದರೂ ಕೂಡ ಇಂತಹ ಹಸಿಹಸಿ ಸುಳ್ಳುಗಳನ್ನು ದಾಖಲಿಸಿರುವುದನ್ನು ಸಂಶೋಧಕರು ಇಲ್ಲಿ ಚರ್ಚಿಸಿ ನಿಜವಾದ ಚರಿತ್ರೆಯನ್ನು ಅರ್ಥೈಸಿಕೊಳ್ಳಬೇಕು ಎಂಬ ಎಚ್ಚರಿಕೆಯನ್ನು ಸಮಾಜಕ್ಕೆ ನೀಡುತ್ತಾರೆ.

**೬. ಡಾ.ಮೀನಾಕ್ಷಿ ಬಾಳಿ**

೧೯೬೨ ರಂದು ಕಲಬುರ್ಗಿಯಲ್ಲಿ ಜನಿಸಿದ ಇವರು ಹಲವಾರು ಜನಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೃತ್ತಿಯಿಂದ ಉಪನ್ಯಾಸಕರಾಗಿ ವಿದ್ಯಾರ್ಥಿಗಳಿಗೆ ಮೌಲಿಕವಾದ ಪಾಠ ಬೋಧನೆಗಳನ್ನು ಮಾಡುತ್ತ ಪ್ರವೃತ್ತಿಯಿಂದ ಹೋರಾಟಗಾರರಾಗಿ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಪ್ರಗತಿಪರ ಮಹಿಳಾ ಆಂದೋಲನದೊಂದಿಗೆ ಗುರುತಿಸಿಕೊಂಡಿದ್ದಾರೆ. ಅಖಿಲಭಾರತ ಜನವಾದಿ ಮಹಿಳಾ ಸಂಘಟನೆ, ಪ್ರಜ್ಞಾಕಾನೂನು ಸಲಹಾ ಸಮಿತಿ, ಸಮುದಾಯ ಸಾಹಿತ್ಯದ ಉಪಾಧ್ಯಕ್ಷರಾಗಿ ಮತ್ತು ಭಾರತೀಯ ವಿಜ್ಞಾನ ಪರಿಷತ್ತಿನ ಸದಸ್ಯರಾಗಿ ಸಂಘಟನೆ ಮತ್ತು ಹೋರಾಟದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. "ಶರಣ ಸಂಸ್ಕೃತಿಯಲ್ಲಿ ಮಾರ್ಕ್ಸ್‌ವಾದವು ಹದವಾಗಿ ಬೆರೆತ ಪ್ರಜ್ಞೆಯುಳ್ಳ ಬಾಳಿಯವರು, ವಚನ ಚಳುವಳಿಯ ಅತ್ಯುತ್ತಮ ಆದರ್ಶಗಳನ್ನು ಇಟ್ಟುಕೊಂಡು ಜಗತ್ತನ್ನು ನೋಡಲು ಬಯಿಸಿದವರು.

ಇವರು 'ಮನದ ಸೂತಕ ಹಿಂಗಿದೊಡೆ' 'ಚಿವುಟದಿರಿ ಚಿಗುರ' ಎಂಬ ವೈಚಾರಿಕ ಕೃತಿಗಳನ್ನು ರಚಿಸಿದ್ದಾರೆ. ಮನದ ಸೂತಕ

ಹಿಂಗಿದೊಡೆ ಕೃತಿಯಲ್ಲಿ ನಿಖರವಾದ ವಿಚಾರಗಳನ್ನು ಹನ್ನೆರಡು ಲೇಖನಗಳ ಮೂಲಕ ಶರಣ ಸಂಸ್ಕೃತಿ, ತತ್ವಪದಕಾರರ ವೈಚಾರಿಕತೆ, ಮಾರ್ಕ್ಸ್‌ವಾದದ ಸ್ಪಷ್ಟತೆಯನ್ನು ಅಭಿವ್ಯಕ್ತಪಡಿಸಿದ್ದಾರೆ. ಇಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ವಿಷಯಕ್ಕೆ ಸಂಬಂಧಿಸಿದಂತೆ ಅವರ ಬರಹಗಳಲ್ಲಿ ಕಾಣಬಹುದು. ಜೊತೆಗೆ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪರ್ಯಾಯ ಚಿಂತನೆಗಳು ಸ್ತ್ರೀಯ ಶಿಕ್ಷಣ, ಭಾಷೆ, ದೇವರು, ಧರ್ಮ, ಭಾನಾಮತಿ, ಮೌಢ್ಯತೆ ನಿರಾಕರಣೆ ಸಾಮಾಜಿಕ ಸಮಾನತೆಯ ಪರಿಕಲ್ಪನೆ ಮತ್ತು ರಾಜಕೀಯ ಪರ್ಯಾಯ ಚಿಂತನೆಗಳನ್ನು ಕುರಿತು ಚರ್ಚಿಸಿದ್ದಾರೆ.

'ಚಿವುಟದಿರಿ ಚಿಗುರು' ಕೃತಿಯಲ್ಲಿ ದೇಶದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಕೊಳ್ಳುಬಾಕು ಸಂಸ್ಕೃತಿಯು ಮನುಷ್ಯರಲ್ಲಿ ಐಹಿಕದಾರರನ್ನು ವೃದ್ಧಿಸಿ ಹೆಣ್ಣನ್ನು ಕೂಡ ಗ್ರಾಹಕ ಸರಕನ್ನಾಗಿ ಪರಿವರ್ತನೆ ಮಾಡಿರುವುದನ್ನು ಕುರಿತು ಚರ್ಚಿಸುವುದರ ಜೊತೆಗೆ ವರದಕ್ಷಿಣೆ, ಹೆಣ್ಣು ಭ್ರೂಣಹತ್ಯೆ, ಮಹಿಳಾ ಮಾರಾಟ ಶಿಶುಹತ್ಯೆ, ಗುಜರ್ ಮದುವೆ ಇಂಥಹ ಹತ್ತು ಹಲವು ವಿಷಯಗಳನ್ನು ವೈಚಾರಿಕವಾದದ ನೆಲೆಯಲ್ಲಿ ಚರ್ಚಿಸಿದ್ದಾರೆ.

**೭. ನೀಲಾ ಕೆ.**

ಕಲ್ಯಾಣದ ಕಾಯಕ ಜೀವಿಗಳ ಚಳುವಳಿ ಮತ್ತು ಮಾಸ್ಕೋದಿಂದ ಸಮಾಜವಾದಿ ನಾಡಿನ ಕಮುನಿಷ್ಟ ಚಳುವಳಿಯ ಸಂದೇಶಗಳ ಮೂಲಕ ಹೋರಾಟಕ್ಕೆ ತೊಡಗಿದವರು. ಇವರು ಬಸವಕಲ್ಯಾಣದಲ್ಲಿ ೧೯೬೬ ರಲ್ಲಿ ಜನಿಸಿದರು. ಇವರಿಗೆ ಹೋರಾಟವೆ ಒಂದು ದೊಡ್ಡ ವಿಶ್ವವಿದ್ಯಾಲಯವಾಗಿ ಶಿಕ್ಷಣವನ್ನು ನೀಡಿತು. ಇವರ ತಂದೆ ಕಮುನಿಷ್ಟರಾಗಿದ್ದರಿಂದ ಇವರು ಬಹು ಬೇಗನೆ ಹೋರಾಟಕ್ಕೆ ಧುಮುಕಲಿಕ್ಕೆ ಸಾಧ್ಯವಾಯಿತು. ಇವರು ಹೋರಾಟದ ಜೊತೆಗೆ ಅನೇಕ ಕೃತಿಗಳನ್ನು ಬರೆದಿದ್ದಾರೆ. 'ಚಿಂತನೆಯಿಲ್ಲದ ಚಳುವಳಿ ಕುರುಡು ಚಳುವಳಿಯಿಲ್ಲದ ಚಿಂತನೆ ಬರುಡು' ಎನ್ನುವ ಹಾಗೆ ಇವರು ಚಿಂತನೆ ಮತ್ತು ಚಳುವಳಿಯನ್ನು ಒಟ್ಟೊಟ್ಟಾಗಿ ನೋಡುತ್ತಾ ಬಂದಿದ್ದಾರೆ. ಚಳುವಳಿಯ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ತೊಗರಿಗೆ ಬೆಂಬಲ ಬೆಲೆ ಘೋಷಿಸಬೇಕು ಸರಕಾರ ಎಂದು ಹೋರಾಟ ಮಾಡಿದಾಗ ಪೊಲೀಸರಿಂದ ಬಂದಿಸಲ್ಪಟ್ಟರು. ಹತ್ತು ದಿನಗಳ ಕಾಲ ಜೈಲುವಾಸ ಅನುಭವಿಸಿದ್ದಾರೆ. ಜೈಲಿನಲ್ಲಿರುವಾಗಲೆ 'ಬದುಕು ಬಂದಿಖಾನೆ' ಎಂಬ ಪುಸ್ತಕವನ್ನು ಬರೆದರು. ನಂತರ 'ನೆಲದ ಪಿಸುಮಾತು' 'ಬಾಳಕೌದಿ' ಇವು ಪ್ರಮುಖವಾದ ವೈಚಾರಿಕ ಕೃತಿಗಳು. ಇದರ ಜೊತೆಗೆ ಬದುಕು ಬೀದಿಯ ಪಯಣ ಎಂಬ ಕವನ ಸಂಕಲನ, ಜ್ಯೋತಿಯೊಳಗಣ ಕಾಂತಿ, ತಿಪ್ಪೆಯನರಸಿ ಮತ್ತು ಇತರ ಕಥೆಗಳು ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ರೇಷನ್ ಕಾರ್ಡ್, ನೀರಿನ ಸಮಸ್ಯೆ, ಶೌಚಾಲಯ, ಸ್ಲಮ್ ನಿವಾಸಿಗಳಿಗೆ ವಸತಿ ನಾಗರಿಕ ಸೌಲಭ್ಯ, ಮೀಸಲಾತಿಗಾಗಿ, ವರದಕ್ಷಿಣೆ ವಿರೋಧಿ ಆಂದೋಲನ, ಅತ್ಯಾಚಾರಿ ವಿರೋಧಿ ಹೋರಾಟ ಮತ್ತು ಉದ್ಯೋಗ ಖಾತ್ರಿಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಹೋರಾಟವನ್ನು ಮಾಡಿದ್ದಾರೆ. ಸ್ತ್ರೀವಾದಿ ಚಿಂತಕಿಯಾಗಿ, ಸಾಮಾಜಿಕ, ರಾಜಕೀಯ ಹೋರಾಟಗಾರ್ತಿಯಾಗಿ ಪ್ರತಿಯೊಂದು ವಿಷಯ ವಸ್ತುವನ್ನು ವೈಚಾರಿಕವಾಗಿ ದಾಖಲೆ ಮಾಡಿದ್ದಾರೆ. ಮಹಿಳಾ ಸಬಲೀಕರಣ ದಲಿತರ ದಾರುಣ ಸ್ಥಿತಿ ಮೂಢನಂಬಿಕೆ, ಭಾನಮತಿ, ದೆವ್ವಭೂತ, ಧರ್ಮ ದೇವರು, ಸಾಮಾಜಿಕ ಸಮಾನತೆ, ಆರ್ಥಿಕ ಅಭಿವೃದ್ಧಿ ಪರ್ಯಾಯ ರಾಜಕೀಯ ಚಿಂತನೆಗಳ ಕುರಿತು ಚರ್ಚಿಸಿದ್ದಾರೆ. ಸಿದ್ಧ ಮಾದರಿಯ ಆದರ್ಶದ ಬೇರುಗಳನ್ನು ಅಲ್ಲಾಡಿಸುವ ಮೂಲಕವೇ ಹೊಸ ಬದುಕಿಗೆ ತುಡಿಯುವ ಮೌಲ್ಯಗಳ ಪ್ರತಿಪಾದನೆಯನ್ನು ಚಿತ್ರಿಸಿದ್ದಾರೆ. ಹೀಗೆ ಹಲವಾರು ಹೋರಾಟಗಳನ್ನು ಮಾಡುತ್ತಿದ್ದಾರೆ.

**೮. ಡಾ.ಎಚ್.ಟಿ.ಪೋತೆ**

ಪ್ರೊ. ಎಚ್.ಟಿ.ಪೋತೆಯವರು ಅಂಬೇಡ್ಕರ, ಫುಲೆ, ಪೆರಿಯಾರ್ ನಾರಾಯಣಗುರು, ಬಿ.ಶಾಮಸುಂದರ್ ಇವರ ಚಿಂತನೆಗಳನ್ನು ಮೈಗೂಡಿಸಿಕೊಂಡು ಗಂಭಿರವಾದ ಅಧ್ಯಯನಕ್ಕೆ ತೊಡಗಿದ್ದಾರೆ. ವೈಚಾರಿಕ ನೆಲೆಯ ಚಿಂತನೆ ಮತ್ತು ಅದರ ಅಧ್ಯಯನಗಳಲ್ಲಿ ತೊಡಗಿ ಭಾರತೀಯ ಸಮಾಜದ ಚರಿತ್ರೆಯನ್ನು ಅಂಬೇಡ್ಕರ ವಿಚಾರದ ಮೂಲಕ ನೋಡುತ್ತ ದಲಿತರ ಏಳಿಗೆಗಾಗಿ ಮತ್ತು ಅವರು ಬದುಕು ಕಟ್ಟಿಕೊಳ್ಳುವಾಗ ಎದುರಾಗುವ ಜಡಗೊಂಡಿರುವ ಸಂಪ್ರದಾಯದ ವಿರುದ್ಧ ಪ್ರತಿಭಟಿಸುವ ವಿಚಾರಗಳು ಅನಾವರಣಗೊಳಿಸಲು ತೊಡಗಿದ್ದಾರೆ. ಇವರು ಅವೈದಿಕ ಚಿಂತನೆ, ಮೂಲ ಭಾರತೀಯರು, ಭೂದೇವತೆಗಳ ಪ್ರಣಾಳಿಕೆಗಳು, ಜೀವಪರ ಚಿಂತನೆ ಸಂಸ್ಕೃತಿ ಸಂಕ್ರಮಣ, ಶರಣ ಸಂಸ್ಕೃತಿ ಮುಂತಾದ ವೈಚಾರಿಕ ಕೃತಿಗಳನ್ನು ರಚಿಸಿದ್ದಾರೆ. ಈ ಸಮಾಜದಲ್ಲಿ ದಲಿತ ಜನಾಂಗದ ದಾರುಣ ಸ್ಥಿತಿಯನ್ನು ದಾಖಲಿಸುವುದರ ಜೊತೆಗೆ ಅವರಿಗೆ ನೈತಿಕವಾಗಿ ಬೆಂಬಲಿಗರಾಗಿದ್ದಾರೆ.

ಹೀಗೆ ಹಲವಾರು ವೈಚಾರಿಕ ಚಿಂತಕರ ಮತ್ತು ಕೃತಿಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಡೋಣಿಯವರು ದಾಖಲಿಸಿದ್ದಾರೆ. ಇದು ಮುಂದೆ ಬರುವ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶಕವಾಗಬಲ್ಲ ಸಂಶೋಧನಾ ಕೃತಿಯಾಗಿದೆ.

ನಂತರದಲ್ಲಿ ಹೈದ್ರಾಬಾದ ಕರ್ನಾಟಕ ವಿಚಾರವಾದಿಗಳ ಜೊತೆಗೆ ಕರ್ನಾಟಕದ ಇತರೆ ಭಾಗದ ಚಿಂತಕರನ್ನು ತೌಲನಿಕವಾಗಿ ಚರ್ಚೆಗೊಳಪಡಿಸಿದ್ದಾರೆ. ಈ ಭಾಗದ ಸಮಸ್ಯೆಗಳನ್ನು ಇಲ್ಲಿಯ ಚಿಂತಕರು ನೋಡುವ ರೀತಿಗೂ ಮತ್ತು ಬೇರೆ ಭಾಗದ ಚಿಂತಕರು ನೋಡುವ ರೀತಿಗೂ ವ್ಯತ್ಯಾಸವಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಆದರೆ ಉಳಿದ ವಿಷಯಗಳನ್ನು ನೋಡಿದಾಗ ಬಹುತೇಕ ಎಲ್ಲ ವಿಚಾರಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಹಾಗೆಯೇ ಕರ್ನಾಟಕದಲ್ಲಿ ನಡೆದ ಹಲವಾರು ಜನಪರ ಚಳುವಳಿಗಳಲ್ಲಿ ಬಂಡಾಯ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ, ಮಹಿಳಾ ಚಳುವಳಿಯನ್ನು ಕುರಿತು ಅತ್ಯಂತ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಹೀಗೆ ಹಲವಾರು ವಿಷಯಗಳನ್ನು ಒಳಗೊಂಡಿರುವ ಈ ಕೃತಿಯು ವೈಚಾರಿಕ ಸಾಹಿತ್ಯದಲ್ಲಿ ಒಂದು ಮೈಲುಗಲ್ಲಾಗಿದೆ ಎಂದು ಹೇಳಬಹುದು. ಸಂಶೋಧಕರಾದ ಡಾ.ಕೈಲಾಸ ಡೋಣಿಯವರು ಇಲ್ಲಿ ವೈಚಾರಿಕತೆಯನ್ನು ಕುರಿತು ದಾಖಲಿಸಿರುವ ಈ ಪ್ರಬಂಧವು ತನ್ನದೆ ಆದ ಕೆಲವು ಇತಿಮಿತಿಗಳನ್ನು ಒಳಗೊಂಡಿದೆ. ಸಂಶೋಧನಾ ಪ್ರಬಂಧಕ್ಕೆ ಬೇಕಾಗುವ ವಿಷಯಗಳನ್ನು ವಿಶ್ಲೇಷಿಸಿ ಉಳಿದ ವಿಷಯಗಳನ್ನು ಕೈಬಿಡಲಾಗಿದ್ದರೂ ಸಮಗ್ರತೆಯ ದೃಷ್ಟಿಯಿಂದ ತುಂಬಾ ಮಹತ್ವದ ಕೃತಿಯಾಗಿದೆ. ಹಾಗಂತ ಇಲ್ಲಿ ಕೃತಿಯುದ್ದಕ್ಕೂ ಚರ್ವಿತ ಚರ್ವಣ ವಿಷಯಗಳೇ ಒಳಗೊಂಡಿದ್ದಾವೆ ಅಂತ ಏನು ಅಲ್ಲ. ತಮ್ಮ ಮಿತಿಯೊಳಗೆ ಏನನ್ನು ದಾಖಲಿಸಬೇಕಾಗಿತ್ತೋ ಅಂತಹದ್ದನ್ನು ಪ್ರಮಾಣಿಕವಾಗಿ ಡೋಣಿಯವರು ಇಲ್ಲಿ ದಾಖಲಿಸಿದ್ದಾರೆ.